**ಕರ್ನಾಟಕದ ಆಧ್ಯಾತ್ಮಿಕ ಪರಂಪರೆ**

# ಹರಿದಾಸ ಪರಂಪರೆಯ ಪ್ರವರ್ತಕ : ಶ್ರೀಪಾದರಾಜರು

ಬಿ.ಎನ್. ವೇಣುಗೋಪಾಲ



ನಮಃ ಶ್ರೀಪಾದರಾಜಾಯ

**ಕ**ನ್ನಡ ಸಾಹಿತ್ಯ ಪರಂಪರೆಯಲ್ಲಿ 'ಹರಿದಾಸ ಸಾಹಿತ್ಯ' ಅತ್ಯಂತ ಪ್ರಮುಖವಾದ ಘಟ್ಟ. ಜನಸಾಮಾನ್ಯರಿಗೂ ತಮ್ಮ 'ತತ್ತ್ವವಾದ'ದ, ಭಾಗವತ ಧರ್ಮದ ಸಾರ ದೊರೆಯಬೇಕೆಂದೂ, ತನ್ಮೂಲಕ ಅವರ ಬಾಳು ಹಸನಾಗಬೇಕೆಂದೂ ಶ್ರೀಮಧ್ವಾಚಾರ್ಯರೇ ಸರಳವಾದ ಸಂಸ್ಕೃತದಲ್ಲಿ ಗೀತೆಗಳನ್ನು ರಚಿಸಿದರು. ಅದಲ್ಲದೆ ತಮ್ಮ ಶಿಷ್ಯರಾದ ಶ್ರೀನರಹರಿ ತೀರ್ಥರಿಗೆ ಕನ್ನಡ ಭಾಷೆಯಲ್ಲಿ ಕೃತಿಗಳನ್ನು ರಚಿಸುವಂತೆ ಪ್ರೇರಣೆ ನೀಡಿದರು. ಹೀಗೆ ಶ್ರೀಮಧ್ವಾಚಾರ್ಯರೇ ಹರಿದಾಸ ಸಾಹಿತ್ಯ ಪರಂಪರೆಗೆ ಬೀಜಾವಾಪನೆ ಮಾಡಿದರು ಎಂದು ಹೇಳಬಹುದು. ಶ್ರೀಮಧ್ವಮುನಿಗಳ ಪ್ರೇರಣೆಯಿಂದ ಕನ್ನಡದಲ್ಲಿ ಕೃತಿಗಳನ್ನು ರಚಿಸಿದ ಶ್ರೀನರಹರಿ ತೀರ್ಥರು, ಈ ದಿಸೆಯಲ್ಲಿ, ಹರಿದಾಸ ಸಾಹಿತ್ಯದ ಮೊದಲಿಗರೆಂದು ಮಾನ್ಯರಾಗಿದ್ದರೂ ಕೂಡ, ಈ ಪರಂಪರೆಗೆ ಒಂದು ನಿರ್ದಿಷ್ಟ ಸ್ವರೂಪವನ್ನು ನೀಡಿ, ಹೆಚ್ಚಿನ ವ್ಯಾಪಕತೆಯನ್ನು ನೀಡಿದ ಕೀರ್ತಿ ನಿಸ್ಸಂದೇಹವಾಗಿ ಶ್ರೀಪಾದರಾಜರಿಗೆ ಸಲ್ಲುತ್ತದೆ. ಶ್ರೀವ್ಯಾಸ ರಾಜರಿಗೆ ಗುರುಗಳಾಗಿ, ಶ್ರೀವಾದಿರಾಜ, ಶ್ರೀಪುರಂದರದಾಸ, ಶ್ರೀಕನಕದಾಸರಿಗೆ ಪರಮಗುರುಗಳಾಗಿ, ತಮ್ಮ ಕೃತಿಗಳ ಮೂಲಕ ದಾಸ ಸಾಹಿತ್ಯ ಪರಂಪರೆಗೆ ಸುದೃಢವಾದ ನೆಲೆಯನ್ನು ಒದಗಿಸಿದ ಶ್ರೀಪಾದರಾಜರನ್ನು ದಾಸ ಪರಂಪರೆಯಲ್ಲಿ ಹೀಗೆ ಅತ್ಯಂತ ಗೌರವ ದಿಂದ ಕಾಣಲಾಗಿದೆ:

ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ ।
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ ॥

ಅದಲ್ಲದೆ, ಶ್ರೀವ್ಯಾಸರಾಜರು, ಶ್ರೀವಾದಿರಾಜರೇ ಮೊದಲಾದ ದಾಸಪರಂಪರೆಯ ಪ್ರಮುಖರು ತಮ್ಮ ಕೃತಿಗಳಲ್ಲಿ ಶ್ರೀಪಾದರಾಜರನ್ನು ಮನಃಪೂರ್ವಕವಾಗಿ ಕೊಂಡಾಡಿದ್ದಾರೆ.

ಬೆಂಗಳೂರಿನ ಸಮೀಪದ ಚನ್ನಪಟ್ಟಣ ತಾಲ್ಲೂಕಿನಲ್ಲಿರುವ ಅಬ್ಬೂರಿನಲ್ಲಿ ತಮ್ಮ ಬಾಲ್ಯವನ್ನು ಕಳೆದ ಶ್ರೀಪಾದರಾಜರ ಪೂರ್ವಾ–ಶ್ರಮದ ಹೆಸರು ಲಕ್ಷ್ಮೀನಾರಾಯಣ ಎಂದು. ಶ್ರೀಪುರುಷೋತ್ತಮ ತೀರ್ಥರೆಂಬ ಮಹಾ ತಪಸ್ವಿಗಳು ವಾಸವಾಗಿದ್ದ ಅಬ್ಬೂರಿಗೆ ಆಗಮಿಸಿದ ಶ್ರೀಪದ್ಮನಾಭ ತೀರ್ಥರ (ಶ್ರೀಮಧ್ವಾಚಾರ್ಯರ ಶಿಷ್ಯರು) ಮಠದ ಪರಂಪರೆಗೆ ಸೇರಿದ ಶ್ರೀಸ್ವರ್ಣವರ್ಣ ತೀರ್ಥರು ಈ ಬಾಲಕನ ಮೇಧಾಶಕ್ತಿಗೆ ಮಾರುಹೋದರು; ಆತನಿಗೆ ಲಕ್ಷ್ಮೀನಾರಾಯಣತೀರ್ಥ ರೆಂದು ನಾಮಕರಣ ಮಾಡಿದರು. ಲಕ್ಷ್ಮೀನಾರಾಯಣತೀರ್ಥರು ಶ್ರೀವಿಬುಧೇಂದ್ರ ತೀರ್ಥರಲ್ಲಿ ವ್ಯಾಸಂಗ ಮಾಡಿದರು. ಗುರುಗಳು ಅವರನ್ನು ಶ್ರೀಪಾದರಾಜರೆಂದೇ ಸಂಬೋಧಿಸಿದ್ದರಿಂದ, ಲಕ್ಷ್ಮೀ ನಾರಾಯಣ ತೀರ್ಥರು 'ಶ್ರೀ ಶ್ರೀಪಾದರಾಜ' ರೆಂದೇ ಪ್ರಖ್ಯಾತರಾದರು.

ಶ್ರೀವ್ಯಾಸರಾಜರಂತಹ ಮಹಾನ್ ವಿದ್ವದ್ವಿಭೂತಿಗೆ ಗುರುವಾಗಿ ಅವರ ಮೂಲಕ ಶ್ರೀಮನ್ಮಧ್ವಸಿದ್ಧಾಂತವನ್ನು ದಿಗಂತವಿಶ್ರಾಂತ ವನ್ನಾಗಿಸಿದ ಕೀರ್ತಿ ಶ್ರೀಪಾದರಾಜರಿಗೆ ಸೇರುತ್ತದೆ. ಅವರು 'ವಾಗ್ವಜ್ರ' ವೆಂಬ ಕೃತಿಯನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದಾರೆ. ತಮ್ಮ ಜೀವಿತಾವಧಿಯಲ್ಲಿ ಅನೇಕ ಮಹಿಮೆಗಳನ್ನು ತೋರಿ, ತನ್ಮೂಲಕ ಸಜ್ಜನರಿಗೆ ಶ್ರೀಹರಿಯಲ್ಲಿ ವಿಶೇಷವಾದ ಭಕ್ತಿಯುಂಟಾಗುವಂತೆ ಮಾಡಿದ ಯತಿವರೇಣ್ಯರು ಅವರು. ತಮ್ಮ ಆರಾಧ್ಯದೈವವಾದ 'ಶ್ರೀರಂಗವಿಠಲ'ನ ಸ್ಮರಣೆಗಾಗಿ, ಅದೇ ಅಂಕಿತದಲ್ಲಿ ರಚಿಸಿರುವ ಕನ್ನಡ ಕೃತಿಗಳಿಂದ ಶ್ರೀಪಾದರಾಜರ ಹೆಸರು ಕನ್ನಡ ಸಾರಸ್ವತ ಲೋಕದಲ್ಲಿ ಚಿರಸ್ಥಾಯಿ ಯಾಗಿದೆ.

## ಶ್ರೀಪಾದರಾಜರ ಕೃತಿಗಳು

ಶ್ರೀಹರಿಯ ಮಹಿಮೆ, ಭಗವದ್ಭಕ್ತಿಯ ಹಿರಿಮೆ, ಶ್ರೀಮಧ್ವರ ಸಿದ್ಧಾಂತದ ಮಹತ್ವ, ರಾಮಾಯಣ ಮಹಾಭಾರತ ಭಾಗವತ ಮೊದಲಾದ ಗ್ರಂಥಗಳಲ್ಲಿ ಪ್ರಕಟಗೊಂಡಿರುವ ವಿಷ್ಣುವಿನ ಅವತಾರ ಲೀಲೆಗಳು, ಆತ್ಮಶೋಧನೆ, ಲೋಕನೀತಿ, ಸಜ್ಜನರಿಗೆ ಮಾರ್ಗದರ್ಶನ ಮುಂತಾದ ಅನೇಕ ವಿಷಯಗಳ ಬಗ್ಗೆ ರಚಿತವಾಗಿರುವ ಶ್ರೀಪಾದ ರಾಜರ ರಚನೆಗಳು, ತಮ್ಮ ಕಾವ್ಯ ಗುಣದಿಂದ, ಮಾಧುರ್ಯ ಲಾಲಿತ್ಯ ದಿಂದ ಜನರ ಮನಸ್ಸಿನಲ್ಲಿ ಶಾಶ್ವತ ಸ್ಥಾನವನ್ನು ಗಳಿಸಿಕೊಂಡಿವೆ.

ನಿಗಮವ ತಂದು ನಗವ ಬೆನ್ನಲಿ ಪೊತ್ತು
ಅಗೆದು ಬೇರು ತಿಂದು ಬಾಲನ ಸಲಹಿದೆ ಅಂದು ।
ಪೊಡವಿ ಈರಡಿ ಮಾಡಿ ಕೊಡಲಿಪಿಡಿದು ಮುನಿ
ಮಡದಿಯ ಸಲಹಿದೆ ಎನ್ನೊಡೆಯ ಶ್ರೀಕೃಷ್ಣ ॥

ಎಂಬ ನುಡಿಗಳಲ್ಲಿನ ಅನುಪ್ರಾಸ ಶ್ರೀಪಾದರಾಜರ ಕಾವ್ಯಪ್ರೌಢಿಮೆಗೆ ಹಿಡಿದ ಕನ್ನಡಿಯಾಗಿದೆ. ಅಷ್ಟೇ ಅಲ್ಲ, ಇಲ್ಲಿ ಬರುವ ಭಗವಂತನ ದಶಾವತಾರ ವರ್ಣನೆ ಕೂಡ ಮನಮುಟ್ಟುವಂತಿದೆ. ದಶಾವತಾರ ಗಳಲ್ಲಿ ಅತ್ಯಂತ ಜನಪ್ರಿಯವಾದ ಶ್ರೀಕೃಷ್ಣನ ಬಾಲಲೀಲೆಗಳನ್ನು ಶ್ರೀಪಾದರಾಜರು ಹೀಗೆ ಹೃದಯಂಗಮವಾಗಿ ವರ್ಣಿಸಿದ್ದಾರೆ:

---

*ಲೇಖಕರು ಬೆಂಗಳೂರಿನ ಬಿ.ಎಚ್. ಎಸ್. ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರು; ದಾಸ ಸಾಹಿತ್ಯದಲ್ಲಿ ಪರಿಣಿತರು.*

ಇದು ಶ್ರೀಕೃಷ್ಣನ ಮಾತು:

'ಗೊಲ್ಲತಿಯರೆಲ್ಲ ಕೂಡಿ ಎನ್ನ ಮೇಲೆ ಇಲ್ಲದ ಸುದ್ದಿ ಪುಟ್ಟಿಸಿ
ಕಳ್ಳನೆಂದು ದೂರುತಾರೆ ಗೋಪಿ, ಎನ್ನ ಕೊಲ್ಲಬೇಕೆಂಬ ಬಗೆಯ'

ಗೋಪಿಯರು ಶ್ರೀಕೃಷ್ಣನ ಮೇಲೆ ದೂರು ಕೊಡುವುದನ್ನು ನೋಡಿ:

'ನಿನ್ನ ಮಗನ ಲೀಲೆಯ ತಾಳಲಾರೆವು ನಾವು
ತರಳನ ಮುಡುಕು ಹೇಳಬಾರದೆ ಗೋಪಾಲಕೃಷ್ಣಗೆ ಬುದ್ಧಿ ಅಮ್ಮ'

ಯಶೋದೆ ಕೃಷ್ಣನಿಗೆ ಹೀಗೆ ಬುದ್ಧಿ ಹೇಳುತ್ತಾಳೆ:

'ಯಾಕೆ ಇಂಥ ಮುಡುಕು ಕೃಷ್ಣಯ್ಯ ನಿನಗೇಕೆ ಇಂಥ ಮುಡುಕು'
'ಸದ್ದು ಮಾಡಲು ಬೇಡವೋ, ನಿನ್ನ ಕಾಲಿಗೆ ಬಿದ್ದು ನಾ ಬೇಡಿಕೊಂಬೆ'

ಈ ಮುಂತಾದ ಕೃತಿಗಳಲ್ಲಿ ಪರಾತ್ಪರ ಸ್ವರೂಪನಾದ ಶ್ರೀಕೃಷ್ಣನ ಬಾಲಲೀಲೆಗಳನ್ನು ಶ್ರೀಪಾದರಾಜರು ಪರವಶರಾಗಿ ವರ್ಣಿಸಿದ್ದಾರೆ.

ಗೋಪಿಯರ ಭಕ್ತಿಭಾವವನ್ನು ಶ್ರೀಪಾದರಾಜರ ಕೃತಿಗಳು ಅತ್ಯಂತ ಉತ್ಕಟವಾಗಿ ಬಿಂಬಿಸಿವೆ.

'ಮಂದಾನಿಲವ ಸಹಿಸಲಾಗದು ನೊಂದೆ ಶುಕ ಪಿಕರವಗಳಿಂದ
ಚಂದ್ರಕಿರಣವು ಬೆಂದೆ ಇನ್ನೀ ವೃಂದಾವನವೇಕವನನಗಲಿ'

ಈ ನುಡಿಗಳಲ್ಲಿ ಕೃಷ್ಣನನ್ನು ಅಗಲಿದ ಗೋಪಿಯ ವಿರಹ ವೇದನೆ ಮಡುಗಟ್ಟಿ ನಿಂತಿದೆ. ಹಾಗೆಯೇ,

'ತರಳೆ ನೀ ಮಥುರೆಗೆ ಗೋಕುಲದಲಿ ನಾವು
ಇರಲಾರೆ ಇರಲಾರೆವೋ ಗೋಪಾಲ' – ಎಂಬ ಗೋಪಿಯರ ಆರ್ತನಾದವು ನಮ್ಮ ಮನಸ್ಸನ್ನು ಹೊಗದೆ ಇರವು.

'ಇಷ್ಟಾಂಗೆ ಇರುವೆನೊ ಹರಿಯೇ ಎನ್ನ ದೊರೆಯೇ
ಸೃಷ್ಟಿವಂದಿತ ಪಾದ ಪದುಮ ಶ್ರೀಹರಿಯೇ'

ಎಂದು ಸರ್ವಸಮರ್ಪಣಾಭಾವವನ್ನು ಶ್ರೀಪಾದರಾಜರು ಬಿಂಬಿಸಿದ್ದಾರೆ. ಅದರಂತೆಯೆ, ಕಾಯಾ ವಾಚಾ ಮನಸಾ ಮಾಡುವ ಸಮಸ್ತ ಕರ್ಮವೂ ಶ್ರೀಹರಿಯ ಪೂಜೆಯೆಂಬ ಶ್ರೀಮಧ್ವಾಚಾರ್ಯರ ಮಾತನ್ನು,

'ನಿನ್ನ ಪೂಜೆಯೋ ರಾಮ, ನಿನ್ನ ಪೂಜೆ ದೊರತಿಲ್ಲ ಎನ್ನ ವ್ಯಾಪಾರವೆಲ್ಲ'

ಎಂಬ ನುಡಿಗಳಲ್ಲಿ ಅನುರಣಿಸುತ್ತಾರೆ. ಭಕ್ತನ ಆತ್ಮಶೋಧನೆ, ಆತ್ಮನಿವೇದನೆಗಳು ಶ್ರೀಪಾದರಾಜರ ಕೃತಿಗಳಲ್ಲಿ ವಿಶೇಷವಾಗಿ ಅಭಿವ್ಯಕ್ತಗೊಂಡಿವೆ.

'ಮಧ್ವನಾಮ' ಎಂಬ ದೀರ್ಘ ಕೃತಿಯನ್ನು ರಚಿಸಿರುವ ಶ್ರೀಪಾದರಾಜರು, ಆ ಕೃತಿಯಲ್ಲಿ ತತ್ತ್ವಜ್ಞಾನಕ್ಕೆ ಹೊಸ ದಿಕ್ಕನ್ನು ತೋರಿದ ಶ್ರೀಮಧ್ವಮುನಿಗಳ ಮಹತ್ವವನ್ನು ಭಾವಪೂರ್ಣವಾಗಿ ಚಿತ್ರಿಸಿದ್ದಾರೆ.

ಗುರುವನ್ನು ಶಿಷ್ಯನು ಸ್ತುತಿಸುವುದು ಸಹಜ. ಆದರೆ, ಶಿಷ್ಯನ ಗುಣಗಳನ್ನು ಮೆಚ್ಚಿ ಕೊಂಡಾಡುವ ಅಪಾರ ಔದಾರ್ಯ ಶ್ರೀಪಾದರಾಜರದು. ಶ್ರೀವ್ಯಾಸತೀರ್ಥರ ಬಗ್ಗೆ ತಮಗಿರುವ ಅಪಾರವಾದ ಪ್ರೀತ್ಯಾದರಗಳನ್ನು ಹೀಗೆ ಹಾಡಿ ತೋರಿಸಿದ್ದಾರೆ:

'ಇವಿರದಾವನು ನಿನಗೀ ಧರೆಯೊಳು
ಪದುಮನಾಭನ ದಾಸ ಪರಮೋಲ್ಲಾಸಾ'

'ಸಾವಿರ ಜಿಹ್ವೆಗಳುಳ್ಳ ಶೇಷನೆ ಕೊಂಡಾಡಬೇಕು
ವ್ಯಾಸಮುನಿರಾಯರ ಸಂನ್ಯಾಸದಿರವ' ಎಂಬುದಾಗಿ ಹಾಡಿ ತೋರಿಸಿದ್ದಾರೆ.

ಶ್ರೀಪಾದರಾಜರು ಜೀವನವನ್ನು ತಮ್ಮ ಕೃತಿಗಳಲ್ಲಿ ಆಳವಾಗಿ ವಿಮರ್ಶೆ ಮಾಡಿದ್ದಾರೆ.

'ಕಾಡ ಬೆಳದಿಂಗಳು ಈ ಸಂಸಾರ ಕತ್ತಲೆ ಬೆಳದಿಂಗಳು'

'ಉಂಟಾದ ಕಾಲಕ್ಕೆ ನೆಂಟರು ಇಷ್ಟರು
ಬಂಟರಾಗಿ ಬಾಗಿಲ ಕಾಯ್ವರು
ಉಂಟಾದತನ ತಪ್ಪಿ ಬಡತನ ಬಂದರೆ
ಒಂಟೆಯಂತೆ ಗೋಣ ಮೇಲೆತ್ತುವರು',

'ಭಕ್ತಿ ಬೇಕು ವಿರಕ್ತಿ ಬೇಕು ಸರ್ವ
ಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವಗೆ'

ಮೇಲಿನ ನುಡಿಗಳು ಗಾಢವಾದ ಜೀವನಾನುಭವದ ಅಭಿವ್ಯಕ್ತಿಗಳಾಗಿ ಮೂಡಿಬಂದಿವೆ.

'ಅಂಬರದಾಳವನು ಇನಶಶಿಗಳಲ್ಲದೆ
ಅಂಬರತಳದಲಾಡುವ ಪಕ್ಷಿ ತಾವು ಬಲ್ಲವೆ?'

'ಕಂಬಳಿಯ ಬುತ್ತಿಯಲಿ ಕಸವನಾರಿಸುವಂತೆ'

'ಸರಕು ಒಪ್ಪಿಸಿದ ಮ್ಯಾಲೆ ಸುಂಕವುಂಟೆ ದೇವಾ'

'ಭವವೆಂಬಟವಿಯಲ್ಲಿ ಭಯಕೊಳದಲಿ ಸಿಕ್ಕಿ
ತಾಪತ್ರಯವೆಂಬ ದಾವಾನಲತಪ್ತ ನರರಿಗೆ
ಹರಿ ನಿನ್ನ ನಾಮಾಶ್ರಯವಲ್ಲದೆ ಮತ್ತುಂಟೆ'

'ಹೆಸರುಳ್ಳ ನದಿಗಳು ಒಳಗೊಂಬೊ ಸಮುದ್ರನು
ಬಿಸುಡುವನೆ ಕಾಲಹೊಳೆಗಳ ಗೋವಿಂದ'

'ಎಷ್ಟು ಜನುಮದಿ ಮನ ಮುಟ್ಟಿ ಮಾಡಿದ ಕರ್ಮ
ಕಟ್ಟೀಗ ಉಣಿಸುತಿಹುದೋ ಕೃಷ್ಣ'

ಮುಂತಾದ ನುಡಿಗಳಲ್ಲಿ ಕಾಣಸಿಗುವ ಕಾವ್ಯಸೌಂದರ್ಯವು ಮನೋಹಾರಿಯಾಗಿದೆ.

ಹೀಗೆ ತಮ್ಮ ಅನನ್ಯವಾದ ಜೀವನಸಾಧನೆಯಿಂದ, ಕಾವ್ಯಸಿದ್ಧಿಯಿಂದ ಕಾವ್ಯಾಗಸದಲ್ಲಿ ಧ್ರುವತಾರೆಯಂತಿರುವ ಶ್ರೀಪಾದರಾಜರ ಬಗ್ಗೆ ಹೇಳುವಾಗ, ಶ್ರೀವ್ಯಾಸತೀರ್ಥರು ಅತ್ಯಂತ ಗೌರವದಿಂದ ಅವರ ಬಗ್ಗೆ ನುಡಿದ ವಿಶೇಷಣಗಳು ಮನಸ್ಸಿನಲ್ಲಿ ತಟ್ಟನೆ ಹೊಳೆಯುತ್ತವೆ.

'ಅಮಿತ ಪುಣ್ಯ ಅಗ್ರಗಣ್ಯನ ವಿಮತಹರನ ವಿನಯಪರನ
ದ್ಯುಮಣಿ ತೇಜನ ದುರಿತದೂರನ ಶಮದಮಾದಿ ಗುಣಸಮುದ್ರನ'

ಅದೇ ರೀತಿ, ಶ್ರೀವ್ಯಾಸತೀರ್ಥರ ಶ್ರೀಪಾದರಾಜರ ಸ್ತುತಿ ಕೂಡ ಹೃದಯದಲ್ಲಿ ಮಾರ್ದನಿಗೊಳ್ಳುತ್ತದೆ.

'ಮಹಿಮೆ ಸಾಲದೆ ಇಷ್ಟೇ ಮಹಿಮೆ ಸಾಲದೆ
ಅಹಿಶಯನನ ಒಲುಮೆಯಿಂದ
ಮಹಿಯೊಳೆಮ್ಮ ಶ್ರೀಪಾದರಾಯರ'